ಈ ಸರ್ಕಾರದ ಕೈಯಲ್ಲಿ ಸಾಧ್ಯವಾಗದೇ ಹೋದರೆ ಇನ್ನು 8-10 ದಿವಸ ಇರುತ್ತೇವೆ. ನಾವು ಇಲ್ಲಿ ಆಗ ಬೇಕಾದರೆ ನಿರ್ಣಯ ಮಾಡೋಣ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಪಕ್ಷದಲ್ಲೂ ಕೂಡ ಕೇಂದ್ರ ಸರ್ಕಾರ ಇದರ ಬಗ್ಗೆ ಓಜರಿಯುತ್ತಿದ ಎಂಬುದನ್ನು ನಾನು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದು ಮುಂದುವರಿಯುತ್ತದೆ ಇದು ಇನ್ನು ಪ್ರಬಲವಾದಂತಹ ಹೆಚ್ಚು ಮಾಹಿತಿ ಬೇಕು ಅಂದರೆ ನಾವು ಇವತ್ತು ದೆಹಲಿಗೆ ಮಾತನಾಡಿ ಅನಂತರ ಬೇಕಾದರೆ ನಾಳೆ ಇದರ ಬಗ್ಗೆ ತಾವು ಪ್ರಸ್ತಾವನೆಯನ್ನು ಮಂಡಿಸಬಹುದು. ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತೇನೆ.

ವಿಷಯ: ಮಹಾಲಕ್ಷ್ಮೀ ಲೇ ಔಟ್ ಲಾಕ್ ಅಪ್‌ನಲ್ಲಿ ನಂಜುಂಡನ ಸಾವು.

ಶ್ರೀ ಕೆ.ಲಕ್ಕಣ್ಣ:- ಸನ್ಮಾನ್ಯ ಅಧ್ಯಕ್ಷರೇ, ಕಳೆದ 24ನೇ ತಾರೀಖು ಮಹಾಲಕ್ಷ್ಮೀ ಲೇ ಔಟ್ ಲಾಕಪ್‌ನಲ್ಲಿ ನಂಜುಂಡ ಎಂಬಾತನು ಸತ್ತಿದ್ದಾನೆ. ಇದು ಆತ್ಮಹತ್ಯೆ ಅಂತ ಹೇಳಿ ಸಂಬಂಧಪಟ್ಟ ಇಲಾಖೆಯವರು ಹೇಳುತ್ತಿದ್ದಾರೆ. ಅವನ ಹೆಂಡತಿ ಸುಮಾರು 40 ದಿವಸಗಳ ಕಾಲ ಸ್ಟೇಷನ್‌ನಲ್ಲಿಟ್ಟುಕೊಂಡು ಹಿಂಸೆ ಕೊಟ್ಟು, ಅವನನ್ನು ಹೊಡೆದು ಸಾಯಿಸಿದ್ದಾರೆ ಅಂತ ಹೇಳಿ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವನು ಯಾವುದೇ ಅಪರಾಧ ಮಾಡಿದ್ದರೂ ಈ ತರಹ ಮಾಡುತ್ತಿರುವುದು ಬಹಳ ಅನ್ಯಾಯ. ಬಹಳವಾಗಿ ಈ ರೀತಿ ಸಾವುಗಳು ಸಂಭವಿಸುತ್ತವೆ. ಸ್ಟೇಶನ್‌ಗಳಲ್ಲಿ ಸಾವುಗಳು ಸಂಭವಿಸುತ್ತಿದ್ದರೂ ಕೂಡ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ಗ ಯಾವ ಶಿಕ್ಷೆಯನ್ನು ಕೊಟ್ಟಿಲ್ಲ. ಇದು ಕೊಡದೇ ಇರುವುದರಿಂದ ಈ ಇಲಾಖೆಯವರನ್ನು ಹೇಳುವವರು ಕೇಳುವವರು ಇಲ್ಲದ ಇರುವ ರೀತಿ ಆಗಿದೆ. ಆ ಬಡಪಾಯಿ ಸತ್ತಿದ್ದಾನೆ ಆತನಿಗೆ ಹೆಂಡತಿ ಮತ್ತು ಇಬ್ಬರು ಮಕ್ಕಳು ಇದ್ದಾರೆ, ಅವರು ಇವತ್ತು ಅನಾಥಗಳಾಗಿದ್ದಾರೆ. 40 ದಿವಸ ಸ್ಟೇಶನ್‌ನಲ್ಲಿಟ್ಟುಕೊಂಡು ಅನ್ನ ಆಹಾರಗಳನ್ನು ಕೊಟ್ಟಿಲ್ಲ ಒಂದು ರೀತಿ ಚಿತ್ರಹಿಂಸೆ ಕೊಟ್ಟು ಸಾವಿಗೆ ಕಾರಣಕರ್ತರಾಗಿದ್ದಾರೆ. ಇವತ್ತಿನ ದಿವಸ ಕಾನೂನಿಗೆ ತಿದ್ದುಪಡಿಯನ್ನು ತಂದು, ಸ್ಟೇಶನ್‌ಗಳಲ್ಲಿ ಯಾರೇ ಅಪರಾಧಿಗಳು ಸತ್ತರೆ ನೇರವಾಗಿ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್ಸ್ ಕೊಲೆ ಆರೋಪವನ್ನು ಎದುರಿಸಬೇಕು.

ಆ ರೀತಿ ಮಾಡದೇ ಇದ್ದರೆ ಇವತ್ತಿನ ದಿವಸ ಪೋಲೀಸ್ ಸ್ಟೇಶನ್‌ಗಳಲ್ಲಿ ಯಾವುದೇ ಒಂದು ಹಿಡಿತವನ್ನು ಕೂಡ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಸಾವುಗಳು ಸ್ಟೇಶನ್‌ನಲ್ಲಿ ಆಗಿವೆ. ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್‌ಗೆ ಶಿಕ್ಷೆ ಕೊಟ್ಟಿಲ್ಲ, ಪೇದೆಗಳಿಗೆ ಶಿಕ್ಷೆ ಕೊಟ್ಟಿರು. ಅವರ ಮೇಲೆ ಕೊಲೆಯ ಆರೋಪವನ್ನು ಹಾಕಬೇಕು. ಇಲ್ಲವಾದರೆ ಇದು ಸಾಧ್ಯವಾಗುವುದಿಲ್ಲ. ಎರಡು ತಿಂಗಳ ಹಿಂದೆ ಒಬ್ಬ ಸೀಮೆ ಎಣ್ಣೆ ಮಾರತಕ್ಕಂಥ ಹೆಂಗಸನ್ನು ಕೂಡ ಹಿಡಿದುಕೊಂಡು ಹೋಗಿ ಮೂರು ದಿವಸಗಳ ಕಾಲ ಇಟ್ಟುಕೊಂಡಿದ್ದಾರೆ. ಕೇಳಿದರೆ ಅವಳು ಸೀಮೆ ಎಣ್ಣೆಯನ್ನು ಬ್ಲಾಕ್‌ನಲ್ಲಿ ಮಾರುತ್ತಿದ್ದಳು, ಆಹಾರದ ಕಾಯಿದೆಯಡಿಯಲ್ಲಿ ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಆ ಹೆಂಗಸನ್ನು ಕೇಳಿದರೆ ಹೇಳುತ್ತಾಳೆ, ಅವರು ಕೇಳಿದಾಗ ಸೀಮೆ ಎಣ್ಣೆ ಕೊಡಲಿಲ್ಲ ಎಂಬ ಕಾರಣಕ್ಕಾಗಿ ಹೀಗೆ ಮಾಡಿದ್ದಾರೆಂದು ಹೇಳುತ್ತಾಳೆ. ಇಂಥ ವಿಚಾರಗಳ ಬಗ್ಗೆ ಇಲಾಖೆಯು ತೀವ್ರತರವಾದ ತನಿಖೆಯನ್ನು ಮಾಡಬೇಕು. ಹಾಗೆಯೇ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್, ದಫೇದಾರ್ ಮತ್ತು ಪೋಲೀಸರ ಮೇಲೆ ಕೊಲೆಯ ಆರೋಪವನ್ನು ಹಾಕಿ, ಅರೆಸ್ಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ.

ಡಾ. ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೇ, ಇದೊಂದು ದೂಜ ವಿಷಯ. ಸಾಧಾರಣವಾಗಿ ಈ ಅರೆಸ್ಟ್, ಪೋಲೀಸ್ ಟಾರ್ಚರ್, ಲಾಕ್‌ಅಪ್ ಡೆಥ್‌ಗಳ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. ಆದರೆ ನಾವು ನಮ್ಮ ಸಮಾಜದಲ್ಲಿ ಏನೊಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ ಎಂದರೆ ಯಾರಾದರೂ ಕೊಲೆ ಮಾಡಿದರೆ, ಅವನಿಗೆ ಆಂಟಿಸಿಪೇಟರಿ ಬೇಲ್ ಸಿಗುತ್ತದೆ, ರಾಜಕಾರಣಿಗಳು ಇಡೀ ರಾಜ್ಯದ ಖಜಾನೆಯನ್ನು ದರೋಡೆ ಮಾಡಿದರೆ ಆಂಟಿಸಿಪೇಟರಿ ಬೇಲ್ ಸಿಗುತ್ತದೆ, ಅಧಿಕಾರಿ ವರ್ತುಲದಲ್ಲಿ ಏನಾದರೂ

ಅನ್ಯಾಯವಾದರೆ ಅವರಿಗೆ ಏನಾದರೂ ಮಾಡಿ ಕಂಡೊನೇಶನ್ ಅಥವಾ 'ಬಿ' ರಿಪೋರ್ಟ್ ಕೂಡ ಆಗುತ್ತದೆ, ಆದರೆ ಯಾವುದೋ ಒಂದು ಯಕಶ್ಚಿತ್ ಕಳ್ಳತನ ಮಾಡಿದಂಥ ವ್ಯಕ್ತಿಯನ್ನು 40 ದಿವಸಗಳ ಕಾಲ ಕೇಸ್ ಇಲ್ಲದೆ, ಬೈಲ್ ಮಾಡದೇ ಇವರು ಆತನನ್ನು ಜೈಲ್‌ನಲ್ಲಿಟ್ಟುಕೊಳ್ಳುತ್ತಾರೆ, ಲಾಕಪ್‌ನಲ್ಲಿಡುತ್ತಾರೆ. ಆ 40 ದಿವಸಗಳಲ್ಲಿ 30 ದಿವಸ ಅವನ ಹೆಂಡತಿ ಊಟವನ್ನು ಹಾಕಬೇಕಾದರೆ ಎಷ್ಟು ಕಷ್ಟವಾಗಿದೆ, ಈ ಸ್ಟೇಶನ್‌ಗಳಲ್ಲಿ ಹೇಗೆ ನಡೆಯುತ್ತಿದೆ ಎಂಬುದು ಕೂಡ ನಮಗೆ ಗೊತ್ತಿದೆ. ಆ ಹೆಂಗಸು ಮೂರು ಸಾವಿರ ರೂಪಾಯಿಗಳವರೆಗೆ ಸಾಲ ಮಾಡಿ ತನ್ನ ಗಂಡನಿಗೆ ಆಹಾರ ಕೊಡಬೇಕೆಂದು ಹೇಳಿದರೆ ಅವಳು, ಸಾಲ ಮಾಡಿ ಆಹಾರ ತಂದುಕೊಡುತ್ತಾಳೆ. ಇದಕ್ಕೂ ಲಾಕ್‌ಅಪ್‌ನಲ್ಲಿ ಡೆಥ್ ಆಯಿತು. ಇವರು ಕ್ರೆಮೇಶನ್‌ಗೆ ಹೋದಾಗ ಅಲ್ಲಿ ಕ್ರೆಮೇಶನ್ ಕ್ಲೋಸ್ ಆಗಿದೆ. ಅಲ್ಲಿನ ವಾಚ್‌ಮೆನ್ ಬೇಡ ಎಂದು ಹೇಳಿದರೂ ಕ್ರೆಮೇಶನ್ ಬಾಗಿಲು ತೆರೆದು, ಒಡೆದು, ಪೂಜೆ ಮಾಡಲು ಬಿಡದೆ, ಅವರಲ್ಲಿ ಶವಸಂಸ್ಕಾರ ಬರಿಯಲ್ ಮಾಡುತ್ತಾರೆ, ಅದಕ್ಕೂ ಆಗುವುದಿಲ್ಲ ಕ್ರೆಮೇಶನ್ ಆಗಬೇಕು, ಅಂದರೆ ಇದರಲ್ಲಿ ಏನೋ ಗೂಢ ರಹಸ್ಯವಿದೆ ಎಂದು ಕಾಣುತ್ತದೆ. ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಒಬ್ಬ ಅಪರಾಧಿ ಎಂದು ತಿಳಿದುಕೊಳ್ಳೋಣ, ಅಂಥವನನ್ನು 40 ದಿವಸಗಳ ಕಾಲ ಸ್ಟೇಶನ್‌ನಲ್ಲಿಟ್ಟಿದ್ದಾರೆ ಎನ್ನುವ ಒಂದೇ ಕಾರಣಕ್ಕಾಗಿ ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರ್‌ನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ ಇದೊಂದು ವಿಷವರ್ತುಲದ ರೀತಿಯಲ್ಲಿ ಇದೆ. ಇಲ್ಲಿ ಯಾರೂ ಒಬ್ಬರನ್ನು ಮತ್ತೊಬ್ಬರು ಬಿಟ್ಟುಕೊಡುವುದಿಲ್ಲ. ಇನ್ನೊಂದು ಕೇಸ್‌ನ ವಿಚಾರವನ್ನು ಹೇಳುತ್ತಾ ಇದ್ದೇನೆ. ಬಸವನಗುಡಿ ಪ್ರದೇಶದಲ್ಲಿನ ಕೇಸ್ ಇದು. ಸಾಧನ ಕುಮಾರಿ ಎಂಬ ಮಹಿಳಾ ಲಾಯರ್ ಒಬ್ಬರ ಕೇಸ್ ಇದು. ಅವರ ತಂದೆ ಇವೊತ್ತು ನನ್ನ ಹತ್ತಿರ ಬಂದಿದ್ದರು. 70 ವರ್ಷದ ಮುದುಕ, ಹಲ್ಲು ಹೋಗಿದೆ, ಆ ಹಲ್ಲುಗಳನ್ನು ಜೇಬಿನಲ್ಲಿಟ್ಟುಕೊಂಡು ಬಂದು ನನಗೆ ತೋರಿಸಿದ್ದಾರೆ. ಅವರಿಗೂ ಸರ್ಟಿಫಿಕೇಟನ್ನು ಕಮಿಶನರ್ ಕೊಡುತ್ತಾರೆ. ಈ ಬಸವೇಶ್ವರ ನಗರದ ಈ ಸ್ಟೇಶನ್ ಬಗ್ಗೆ ಆ ದಿವಸವೇ ನಾನು ಹೇಳಿದ್ದೆ, ಈ ಕೆಂಪಯ್ಯ ಗೌಡ, ಅನಾಥ ಶಿಶುಗಳನ್ನು ಲಪಟಾಯಿಸುವಂಥ ದರೋಡೆ ಮಾಡುವಂಥ ಕರಾಳ ಒಂದು ಕೃತ್ಯ ಮಾಡಿದ್ದಾರೆ. It is a nexus --- ಇವೊತ್ತು ಈ ಸಾಧನ ಕುಮಾರಿಯವರ ಕೇಸನ್ನು ನೋಡಿದರೆ ಇವರು ಪೋಲೀಸರೋ ಅಥವಾ ಡಕಾಯಿತರೇ ಎನ್ನುವ ಸಂಶಯ ಬರುತ್ತದೆ.

ಎಲ್ಲರ ಮೇಲೂ ಈ ರೀತಿಯಲ್ಲಿ ಹೇಳಲು ನಾನು ತಯಾರಾಗಿಲ್ಲ. ನಮ್ಮಲ್ಲಿ ಬೆಳೆದು ಬಂದ ಹಾಗೆ ರಾಜಕಾರಣಿಗಳು ತಪ್ಪು ಮಾಡಿದರೆ ಅವರನ್ನು ಪ್ರೊಟೆಕ್ಟ್ ಮಾಡಲು ಹೋಗುತ್ತೇವೆ. ಅಧಿಕಾರಿಗಳ ತಪ್ಪು ಆದರೆ ಕಮಿಶನರ್ ಇಮ್ಮೀಡಿಯಟ್ ಆಗಿ ಸರ್ಟಿಫಿಕೇಟ್ ಕೊಡುತ್ತಾರೆ. It is a case of hanging. If it is a case of suicide where was the necessity to hurry through..

ಇದು ಅನ್ಯಾಯದ ಪರಮಾವಧಿಯಾಗಿದೆ. ಜನರು ಈ ಹೊಸ ಸರಕಾರ ಬಂದರೆ ಏನೋ ಸುಧಾರಣೆ ಆಗುತ್ತದೆ ಎಂದು ತಿಳಿದಿದ್ದರು. ಈ ನೆಕ್ಸಸ್ ಏನಿದೆ one of the most dangerous one. Some of these people are dacoits in uniform. ಎಂದು ಹೇಳುತ್ತೇನೆ. ಅನ್ಯಾಯ, ಲಪಟಾಯಿಸುವುದು, ಮಿಡ್ಲ್‌ಮೆನ್‌ಗಳು, ಡಕಾಯಿತಗಳು, ಮಾಫಿಯಾ, ಮಟ್ಕಾ ನಡೆಸುವವರು ಪೋಲೀಸ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳು, ಕಾನ್ಸ್‌ಟೇಬಲ್‌ಗಳು. ಈ ಕಾಲ್ಸ್‌ಟೇಬಲ್‌ಗಳು ಎಷ್ಟು ದುರಹಂಕಾರವನ್ನು ತೋರಿಸುತ್ತಾರೆ ಎಂದರೆ, ಇವರಿಗೆ ಟ್ರಾನ್ಸ್‌ಫರ್ ಆಗುವುದಿಲ್ಲ. ಇವರುಗಳು ಒಂದೇ ಕಡೆ ಇರುತ್ತಾರೆ. ಕಾನ್ಸ್‌ಟೇಬಲ್‌ಗಳನ್ನು ಟ್ರಾನ್ಸ್‌ಫರ್ ಮಾಡಬಾರದು ಎಂದು ನಿಯಮ ಇದೆ. 20-25 ವರ್ಷಗಳ ಕಾಲ ಒಂದೇ ಸ್ಥಳದಲ್ಲಿರುತ್ತಾರೆ. ಅವರ ಅವರ ಮಿತ್ರತ್ವ ಇರುವುದು, ಗೂಂಡಾಗಳ, ಮಾಫಿಯಾಗಳ, ಮಟ್ಕಾ ದೊರೆಗಳ ಜೊತೆಯಲ್ಲಿ. ಮಾನ್ಯ ಹಾರ್ನಳ್ಳಿಯವರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ, ಇವೊತ್ತಿನ ದಿವಸ ಯಾವನೋ ಒಬ್ಬ ಯಕಶ್ಚಿತ್ ಕಳ್ಳ ಏನು ಕದ್ದಿದ್ದನೋ ಏನೋ ಆದರೆ ಆತನನ್ನು ಲಾಕ್‌ಅಪ್‌ನಲ್ಲಿ ಇಟ್ಟ ಮೇಲೆ ಹೇಗೆ ಇಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಅವನಿಗೆ ಲಂಗೋಟಿ ಬಿಟ್ಟರೆ, ಬೇರೆ ಏನೂ

ಇರುವುದಿಲ್ಲ. ಅವನಿಗೆ ಊಟವನ್ನು ಕೊಡುವುದಿಲ್ಲ, ಹಾಗಿದ್ದಮೇಲೆ ಬೆಡ್‌ಶೀಟ್‌ನ್ನು ಕೊಡುತ್ತೀರಾ? ಅವನು ಹ್ಯಾಂಗ್ ಮಾಡಿಕೊಂಡಿದ್ದಾನೆ ಎಂದು ಹೇಳುತ್ತೀರಿ? ಅಲ್ಲಿಂದ ಬರಿಯಲ್ ಗ್ರೌಂಡ್‌ಗೆ ತೆಗೆದುಕೊಂಡು ಹೋಗಿದ್ದೀರಿ? ಏನು ಮಾಡಿದ್ದೀರಿ? ಬಹಳ ಸುಲಭವಾಗಿ ಸಿಓಡಿ ಎನ್‌ಕ್ವಾಯರಿ ಎಂದು ಹೇಳುತ್ತೀರಿ? ಏನು ಸಿಓಡಿ ಎನ್‌ಕ್ವಾಯರಿ ಅದು? ಸಿಓಡಿಯವರು ಪೋಲೀಸರ ಮೇಲೆ ತನಿಖೆ ಮಾಡಿದರೆ ಯಾವ ತರಹದಲ್ಲಿ ಕೆಲಸ ಮಾಡುತ್ತಾರೆ ಎಂಬ ಬಗ್ಗೆಯೂ ಗೊತ್ತಿದೆ. They go to the protection of the fraternity. I am not interested in argument. With all humility at my command I say. ನಿಮಗೆ ತಾಕತ್ತು ಇದ್ದರೆ keep him under suspension.. I am really - I am so sorry.. ಪೋಲೀಸ್ ಕಮಿಷನರ್ ಚಂದೂಲಾಲ್‌ರಂಥವರು this is the third case he has come in protection of his subordinates. Everyday cases - -

ಸರಕಾರದ ಒಂದು ಇಲಾಖಾ ಮುಖ್ಯಾಧಿಕಾರಿಯಾಗಿ ತನ್ನ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ಸ್‌ಪೆಕ್ಟರ್ ಮಾಡಿದ್ದು ನ್ಯಾಯ ಎಂದು ಹೇಳುತ್ತಾರೆ. ಇವರುಗಳು ಮಾಡುವಂಥ ಅನ್ಯಾಯ, ವಂಚನೆ, it is a clear nexus to this.

ನಾನು ಈ ಮಾತನ್ನು ಇವೊತ್ತು ಏಕೆ ಹೇಳುತ್ತಿದ್ದೇನೆ ಎಂದರೆ, ದರೋಡೆ ಮಾಡಿದರೆ ರಾಜಕಾರಣಿಗಳಿಗೆ ಆಂಟಿಸಿಪೇಟರಿ ಬೇಲ್ ಸಿಗುತ್ತದೆ, ಅಧಿಕಾರಿಗಳಿಗೆ ಸಿಗುತ್ತದೆ, ಇಂಥಾದ್ದರಲ್ಲಿ ಒಬ್ಬ ಸಾಮಾನ್ಯ ಕಳ್ಳ ಏನು ಮಾಡಿಯಾನು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಒಬ್ಬ ಪೋಲೀಸ್ ಅಧಿಕಾರಿಯು ಹೀಗೆ ಮಾಡಿದ್ದಾನೆ ಎಂದು ಹೇಳಿ ಪತ್ರಿಕೆಯಲ್ಲಿ ವರದಿ ಮಾಡಿದ್ದಕ್ಕೆ ಆ ಪೋಲೀಸ್ ಅಧಿಕಾರಿಯ ಪರವಾಗಿ ಇರತಕ್ಕಂಥ ಗೂಂಡಾಗಳು ಆ ಜರ್ನಲಿಸ್ಟ್‌ಳ ಲೈಫ್‌ಗೆ ಥ್ರೆಟನ್ ಮಾಡಿದ್ದಾರೆ. It is very unfortunate.. a Journalist was threatened. She was a lady journalist - - ಅವರು ವರದಿಯಲ್ಲಿ ಅಧಿಕಾರಿಗಳ ಬಣ್ಣವನ್ನು ಬಿಡಿಸಿದ್ದರಿಂದ ಹೀಗೆ ಥ್ರೆಟ್ ಮಾಡಿದ್ದಾರೆ. She came weeping to my House..

ಶ್ರೀ ಬಿ.ಎಸ್. ಯಡಿಯೂರಪ್ಪ:- 302ರ ಪ್ರಕಾರ ಕೇಸ್‌ನ್ನು ಬುಕ್ ಮಾಡಿ ಸಂಬಂಧಪಟ್ಟ ಅಧಿಕಾರಿಯನ್ನು ಮೊದಲು ಒಳಗೆ ಕಳುಹಿಸಬೇಕು. ಇಲ್ಲವಾದರೆ ಖಂಡಿತವಾಗಿ ಒಳ್ಳೆಯ ಕೆಲಸ ಮಾಡಲು ಆಗುವುದಿಲ್ಲ.

ಡಾ. ಜೀವರಾಜ ಆಳ್ವ:- ಯಾವ ಅಧಿಕಾರಿ ವರ್ತುಲದ ಬಗ್ಗೆ, ಪೋಲೀಸರ ಬಗ್ಗೆ ನಮಗೆ ಹೆಮ್ಮೆ ಇದೆಯೋ, we are proud of them. ಈ ತರದ ಅನ್ಯಾಯ, ಮೋಸ, ವಂಚನೆ, ಎಲ್ಲಾ ಲಂಪಟತನವನ್ನು ಇವರು ಮಾಡಿಕೊಂಡು, Without going into depth, their go to the protection to their subordinates... ಇದು ಯಾವ ರೀತಿಯ ನಾಗರೀಕತನ? 40 ದಿವಸ ಅವನನ್ನು ಲಾಕ್‌ಅಪ್‌ನಲ್ಲಿಟ್ಟು, ಹೀಗೆ ಮಾಡಿದ್ದಾರಲ್ಲ? ಅದಕ್ಕೆ ಸಿಓಡಿ ಎನ್‌ಕ್ವಾಯರಿ ಬೇಕಾಗಿಲ್ಲ, ಸಿಓಡಿ ವಿಚಾರಣೆ ಮಾಡುತ್ತೇವೆ ಎಂದು ಬೇಕಾದ ಎಲ್ಲಾ ಅವಕಾಶಗಳನ್ನು ಅವರಿಗೆ ಮಾಡಿಕೊಡುತ್ತೀರಿ ಅಷ್ಟೆ. ಮಾನ್ಯ ಉಪಮುಖ್ಯಮಂತ್ರಿಯವರು ಇದನ್ನು ಪರಿಶೀಲಿಸಿ ಇಂಥ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೇನೆ ಎಂದು ಹೇಳಬೇಕು. ಅಧಿಕಾರದಲ್ಲಿ ಯಾವ ಸರಕಾರವೇ ಇರಲಿ, ಅವರು ಈ ಅಧಿಕಾರಿಗಳ ಬಗ್ಗೆ ಹೆಚ್ಚಿನ ರಕ್ಷಣೆಗೆ ಹೋಗಬಾರದು. ಸ್ವಲ್ಪ ದಿನ ಕಾಯ್ದು ನೋಡಿ. ತತ್‌ಕ್ಷಣವೇ ಇಲ್ಲ. ಆದು ಹ್ಯಾಂಗಿಂಗ್‌ಕೇಸ್ ಎಂದು ನೀವೇ ಹೇಳುವಂಥ ವ್ಯವಸ್ಥೆ ಬೇಡ. ಇದರ ಬಗ್ಗೆ ನಿನ್ನೆಯೇ ಒಬ್ಬ ಡಿಸಿಪಿ, ಸಾಧನಕುಮಾರಿ ಅಡ್ವೋಕೇಟ್ ಹತ್ತಿರ ಹೋಗಿದ್ದಾರೆ. ಹಿಂದೆ ಯಾರೋ ಒಬ್ಬ ಪೋಲೀಸ್ ಟಾರ್ಚರ್‌ಗೆ ಒಳಗಾದ ವ್ಯಕ್ತಿಯನ್ನು ಒಬ್ಬ ಸದಸ್ಯರು ಇಲ್ಲಿ ತಂದಿದ್ದರು. ನಾನೂ ಕೂಡ

ಆ ಮುದುಕರನ್ನು ನಿಮಗೆಲ್ಲ ತೋರಿಸಬೇಕೆಂದು ಮಾಡಿದ್ದೆ. 70 ವರ್ಷದ ಒಬ್ಬ ವಯಸ್ಕ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರು, ಒಬ್ಬ ಯೋಗ ಮಾಡಿದವರು. ಅವರದ್ದು ಏನೇ ಒಂದು ಸಿಪಿಲ್ ಡಿಸ್ಪ್ಯೂಟ್ ಇದೆ, ಎಂದು ಹೋದರೆ ಅವರನ್ನು ಈ ರೀತಿಯಾಗಿ ನೋಯಿಸಿದ್ದಾರೆ. ಇಂಥದನ್ನೆಲ್ಲಾ ನಾವುಗಳು ನೋಡಿಕೊಂಡು ಶಾಸನ ಸಭಾ ಸದಸ್ಯರಾಗಿ ಸುಮ್ಮನೇ ಇರಬೇಕೆ? ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆ? ನ್ಯಾಯವು ಇಂಥ ವಿಚಾರಗಳಲ್ಲಿ ಎಲ್ಲರಿಗೂ ಸರಿಯಾಗಿ ಸಿಗುತ್ತದೆಯೇ ಎಂಬ ವಿಚಾರ ಮಾಡಬೇಕಾದ ಸಮಯ ಬಂದಿದೆ.

ಒಬ್ಬ ವರ್ಚಸ್ಸು ಇರುವಂತಹ ದೊಡ್ಡ ಹಣವಂತ ಶ್ರೀಮಂತ, ರಾಜಕಾರಣಿ ಅಧಿಕಾರಿ ಏನೇ ಮಾಡಿದರೂ ನಡೆಯುತ್ತದೆ. ಆದರೆ ಒಬ್ಬ ಅತ್ಯಂತ ಕಡು ಬಡವ ಏನು ಮಾಡಬೇಕು? ಆ ಹೆಂಗಸು ಹೇಳುವಾಗ ಅದನ್ನೆಲ್ಲ ಟೇಪ್ ಮಾಡಿಕೊಂಡು ಇಟ್ಟುಕೊಂಡಿದ್ದೇವೆ. ಮೂರು ಸಾವಿರ ರೂಪಾಯಿಯನ್ನು ನೂರು ನೂರು ರೂಪಾಯಿ ತರಹ ಊಟ ಕೊಡಲಿಕ್ಕೆ ಇವರು ತೆಗೆದುಕೊಂಡಿದ್ದಾರೆಂದು ಹೇಳುತ್ತಾಳೆ. ಆಮೇಲೆ ಸಿಂಧ್ಯರವರು ಹೇಳಿದರು. ಅತ್ಯಂತ ಒಬ್ಬ ದೊಡ್ಡ ಓರಿಯ ಪತ್ರಿಕೋದ್ಯಮಿಯವರು ಬಂದು ಅಳುತ್ತಾರೆ: ನನಗೆ ತ್ರೆಟನಿಂಗ್ ಕಾಲ್ಸ್ ಬರುತ್ತಾ ಇದ. ನಮಗೆ ಒಬ್ಬ ಅಧಿಕಾರಿಯ ಬಗ್ಗೆ I am not going into the merits and demerits of the case.

ಯಾವುದೋ ಒಬ್ಬ ಪತ್ರಕರ್ತ ಒಬ್ಬರ ಬಗ್ಗೆ ಬರೆದಾಗ ಅವರನ್ನು ರೇಪ್ ಮಾಡಿಸುತ್ತೇವೆ, ಅವರನ್ನು ಲಿಕ್ವಿಡೇಟ್ ಮಾಡಿಸುತ್ತೇವೆ, ಅನ್ನುವ ಛಲ, ಯಾರಿಗಾದರೂ ಫೋನ್ ಮಾಡುವಂತಹ ಧೈರ್ಯ ಇದ್ದಿದ್ದರೆ ಏನು ತಪ್ಪು? ನಮ್ಮ ಬಗ್ಗೆಯು ಹಲವಾರು ಸಾರಿ ಪತ್ರಿಕೆಯಲ್ಲಿ ಬರುತ್ತದೆ. ಬರೆದಿರುವುದು ತಪ್ಪೋ ಒಪ್ಪೋ ಗೊತ್ತಿಲ್ಲ. We are not going into the merits and demerits of the case. But ಇವತ್ತು ನಾವು freedom of speech and freedom of liberty to the journalist ಎಂದು ಹೇಳುತ್ತಿದ್ದೇವೆ. ಪತ್ರಿಕೋದ್ಯಮಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆಂದು ಹೇಳುತ್ತೇವೆ. ಒಬ್ಬ ಹುಡುಗಿ ಬಹಳಷ್ಟು ಧೈರ್ಯದಿಂದ, ಛಲದಿಂದ ಬರೆಯುತ್ತಾಳೆ ಅಂದಾಗ, ಈ ವ್ಯವಸ್ಥೆ ನಿರ್ಮಾಣವಾಗಿದೆ. ಆದ್ದರಿಂದ ಇದು ಅತ್ಯಂತ ಗಹನವಾದಂತಹ ವಿಚಾರವಾಗಿದೆ. ಈ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಬಸವೇಶ್ವರ ನಗರದಲ್ಲಿ ಆದಂತಹ ಘಟನೆ ಬಗ್ಗೆ ಮತ್ತು ಮಹಾಲಕ್ಷ್ಮಿ ಲೇಔಟ್‌ನಲ್ಲಿ ಆಗಿದ್ದರ ಬಗ್ಗೆ ಕೂಡಲೆ ತೀರ್ಮಾನ ತೆಗೆದುಕೊಂಡು ಸಂಬಂಧಪಟ್ಟಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಅವರನ್ನು ಅಮಾನತ್ತಿನಲ್ಲಿಡತಕ್ಕದ್ದಲ್ಲ, ಅವರನ್ನು ವಜಾ ಮಾಡಬೇಕು, 302ನೇ ಕಾಲಂ ಪ್ರಕಾರ ಅವರನ್ನು ಬಂಧಿಸಿ, ಕೊಲೆ ಆಪಾದನೆಯ ಕೇಸನ್ನು ಹಾಕಬೇಕಾಗಿದೆ. ಅಷ್ಟು ಸುಲಭವಾಗಿ ಬಿಡುವಂತಹದ್ದು ಅಲ್ಲ; ಈ ನಂಜುಂಡ ಅನ್ನುವವರು 40 ದಿನಗಳಿಂದ ಲಾಕಪ್‌ನಲ್ಲಿದ್ದು ಅವನು ನೇಣು ಹಾಕಿಕೊಂಡ ಎಂದು ಹೇಳುತ್ತಾರೆ. ಅನೇಕ ಸಾರಿ ನನ್ನನ್ನೂ ಲಾಕಪ್‌ನಲ್ಲಿಟ್ಟಿದ್ದಾರೆ. ಲಾಕಪ್‌ನಲ್ಲಿ ಒಳಗಡೆ ಯಾರನ್ನಾದರೂ ಕಳುಹಿಸಬೇಕಾದರೆ ಪೋಲೀಸಿನವರಿಗೆ ಏನೂ ದಯಾ ದಾಕ್ಷಿಣ್ಯವಿರುವುದಿಲ್ಲ, ಇವರು ರಾಜಕಾರಣಿಗಳು, ಇವರು ಹೋರಾಟವನ್ನು ಮಾಡಿದವರು ಇವರು ಚಳುವಳಿಯನ್ನು ಮಾಡಿದವರು ಎಂದು ಏನೂ ಪ್ರಶ್ನೆ ಇಲ್ಲವೇ ಇಲ್ಲ. ಒಳಗಡೆ ಹೋಗುವಾಗ ಜನಿವಾರ ಇದ್ದರೆ ಜನಿವಾರವನ್ನು ಬಿಚ್ಚಿಸಿಹಾಕುತ್ತಾರೆ. ಶಿವದಾರ ಇದ್ದರೆ ಶಿವದಾರವನ್ನು ಬಿಚ್ಚಿಸಿ ಹಾಕುತ್ತಾರೆ. ಉಡಿದಾರ ಇದ್ದರೆ, ಉಡಿದಾರವನ್ನು ಬಿಚ್ಚಿಸಿಹಾಕುತ್ತಾರೆ. ಲಾಕಪ್ ಒಳಗೆ ಇರುತ್ತದ ಅಂದರೆ ಪೋಲೀಸಿನವರ ಎದುರಿಗೆ ಕಾಣುವ ಹಾಗೆ ಇಟ್ಟುಕೊಂಡಿರುತ್ತಾರೆ. ಪ್ರತಿಸಾರಿಯೂ ಅವರು ಲಾಕಪ್‌ನಲ್ಲಿ ಸತ್ತ ಅಂತ ಹೇಳುತ್ತಾರೆ. ಅವರ ಹೊಡೆಯು ಸಾಯಿಸಿ, ಲಾಕಪ್‌ನಲ್ಲಿ ಸಾಯಲಿಲ್ಲ ನೇಣಾಕಿಕೊಂಡು ಸತ್ತ, ಪಾಂತಿಯಿಂದ

ಸತ್ತ, ಹೊರಗಡೆ ಹೋಗುತ್ತಿದ್ದ, ಅವನಿಗೆ ರಕ್ತದ ಒತ್ತಡ ಇತ್ತು. ಈ ರೀತಿ ಬರೀ ಸುಳ್ಳನ್ನು ಹೇಳುತ್ತಿದ್ದಾರೆ. ಮೊನ್ನೆ ನಡೆದಂತಹ ನಂಜುಂಡನ ಪ್ರಕರಣವನ್ನು ಇದನ್ನು ಮುಚ್ಚಿಹಾಕಬೇಕೆಂದು ಹೇಳಿ ಸಮಗ್ರವಾಗಿ ಒಂದು ಚಿಂತನೆ ನಡೆಯುತ್ತಿದೆ. ಇವನು ನಿರಾಪರಾಧಿ, ಇವನು ತೀರ ಬಡವ, ಅವನ ಹೆಂಡತಿಯು ಬೀದಿಯಲ್ಲಿ ಭಿಕ್ಷೆಯನ್ನು ಎತ್ತುವಂತಹ ಪರಿಸ್ಥಿತಿಯಲ್ಲಿದ್ದಾಳೆ. ನಂಜುಂಡನನ್ನು 40 ದಿವಸ ಇಟ್ಟುಕೊಂಡಿರತಕ್ಕಂಥದ್ದಕ್ಕೆ ಸಾಕ್ಷಿ ಆಧಾರಗಳು ಇಲ್ಲ. ಇನ್ನೊಂದು ಮಹಾಲಕ್ಷ್ಮಿ ಲೇಔಟ್‌ನಲ್ಲಿ ನಡೆದಿದೆ. ಮತ್ತೊಂದು ಜನವರಿ ತಿಂಗಳಲ್ಲಿ ಶಿವಣ್ಣ ಅಂತ ಅರಳೆಪೇಟೆಯ ಹುಡುಗ, ಕೆಂಗೇರಿಗೇಟ್ ಪೋಲೀಸ್ ಸ್ಟೇಷನ್‌ನಲ್ಲಿ ಆ ಶಿವಣ್ಣನನ್ನು ನೇತುಹಾಕಿ ಪೋಲೀಸಿನವರೇ ಕೊಂದಿದ್ದಾರೆ. ಇವತ್ತಿನವರೆಗೂ ಪೋಲೀಸಿನವರ ಹತ್ತಿರ ಅವನು ಹಗಲು ರಾತ್ರಿ ದುಮ್ಮಗಾಲನ್ನು ಇಡುತ್ತಿದ್ದಾನೆ. ನೀನು ಎಲ್ಲಿಗೂ ಹೋಗಬೇಡ, ಯಾರಿಗೂ ನೀನು ಹೇಳಬೇಡ, ನಿನಗೆ ಅಷ್ಟು ಹಣವನ್ನು ಕೊಡುತ್ತೇವೆಂದು ಹೇಳಿ, ಅವನ ಹೆಂಡತಿಗೆ ಹೆದರಿಸಿ, ಮನೆಯವರಿಗೆ ಹೆದರಿಸಿದ್ದಾರೆ. ನಾನು ಬೇಡಿಕೆಯ ಬಗ್ಗೆ ಚರ್ಚೆ ನಡೆಯುತ್ತದ, ನೀವು ಎಲ್ಲವನ್ನು ತೆಗೆದುಕೊಂಡು ಬಾ ಎಂದು ಹೇಳಿದೆ. ನನ್ನ ಹತ್ತಿರ ಮಾಹಿತಿಯನ್ನು ತಂದು ಕೊಟ್ಟಿದ್ದಾರೆ. ಶಿವಣ್ಣ ಅಂತ 45 ವರ್ಷದವನು ಬಹಳ ಒಳ್ಳೆಯ ಮನುಷ್ಯ. ಅವನನ್ನು ಕರೆದುಕೊಂಡು ಹೋಗಿ ಕೆಂಗೇರಿ ಗೇಟ್‌ನಲ್ಲಿ ಪೋಲೀಸಿನವರು, ಯಾರು ಅಪರಾಧವನ್ನು ಮಾಡಿದರೆ ಅವರ ಎದುರಿಗೆ ನಿಲ್ಲಿಸಿ ಪೋಲೀಸಿನವರು ಅವನಿಗೆ ಹೊಡೆದು ಬಟ್ಟೆಬಿಚ್ಚಿಸಿ, ಹೊಡೆದರು ಆತ ಅಲ್ಲೇ ಸತ್ತ. ಇದು ಪ್ರಶ್ನೆ. ಇದು ಬೆಂಗಳೂರಿನಲ್ಲಿ ಪ್ರತಿನಿತ್ಯ ಎಲ್ಲಾ ಸ್ಟೇಷನ್‌ಗಳಲ್ಲಿ ನಡೆಯುತ್ತಿದೆ. ಕೆಲವು ಪತ್ರಿಕೆಗಳಲ್ಲಿ ಬರುತ್ತವೆ, ಕೆಲವು ರಾಜಕಾರಣಿಗಳ ಗಮನಕ್ಕೆ ಬಂದಾಗ ಬರುತ್ತದೆ. ಕೆಲವು ಪ್ರಚಾರವಾಗದೆ ನಡೆಯುತ್ತಿರತಕ್ಕಂಥ 108 ಕೇಸುಗಳು ಇವೆ. ಇದರ ಬಗ್ಗೆ ಸಮಗ್ರವಾದಂತಹ ಚರ್ಚೆಯಾಗಬೇಕಾಗಿದೆ. ಶಿವಣ್ಣನಿಗೆ ಸಂಬಂಧಪಟ್ಟಿದ್ದು ಮತ್ತು ನಂಜುಂಡನಿಗೆ ಸಂಬಂಧಪಟ್ಟಿದ್ದು ಇವೆರಡನ್ನು ಯಾರು ಮಾಡಿದ್ದಾರೆ ಅವರನ್ನು ಸಂಪೂರ್ಣವಾಗಿ ಕೆಲಸದಿಂದ ವಜಾ ಮಾಡಬೇಕು. ಮತ್ತು ಅವರ ಮೇಲೆ ಕೊಲೆ ಆರೋಪಣೆಯ ಮೇಲೆ 302ನೇ ಕಾನೂನಿನ ಪ್ರಕಾರ ಕೇಸನ್ನು ದಾಖಲು ಮಾಡಬೇಕು. ಇದು ಬಹಳ ಅತ್ಯಂತ ಗಂಭೀರವಾದಂತಹ ಪರಿಸ್ಥಿತಿಯಾಗಿದೆ. ಹಿಂದೆ ವೈಯಾಲಿಕಾವಲ್‌ನಲ್ಲಿ ಮುನಿಯಮ್ಮನ ಪ್ರಕರಣ ನಡೆಯಿತು. ಮುನಿಯಮ್ಮನ ಪ್ರಕರಣ ಈಸದನದಲ್ಲಿ ಮೂರು ದಿನಗಳ ಕಾಲ ಚರ್ಚೆ ನಡೆಯಿತು. ಪೋಲೀಸಿನವರು ಅವರ ಇಚ್ಛೆ ಬಂದ ಹಾಗೆ ಮಾಡುತ್ತಿದ್ದಾರೆ. ಅವರಿಗೆ ರಾಜಕಾರಣದ ಬಗ್ಗೆ ನಂಬಿಕೆ ಇಲ್ಲ, ಬೆಲೆ ಇಲ್ಲ, ಪತ್ರಿಕೆಗಳ ಬಗ್ಗೆ ಅವರಿಗೆ ಬೆಲೆ ಇಲ್ಲ, ಶಾಸನ ಸಭೆಯ ಬಗ್ಗೆ ಬೆಲೆ ಇಲ್ಲ, ಯಾರ ಬಗ್ಗೆಯೂ ಅವರಿಗೆ ಬೆಲೆ ಇಲ್ಲ.

ಈ ಪರಿಸ್ಥಿತಿಯಲ್ಲಿರುವಾಗ ನಾವು ಇದನ್ನು ಒಪ್ಪೊಂದು ಗಂಭೀರವಾಗಿ ತೆಗೆದುಕೊಳ್ಳತಕ್ಕಂಥದ್ದು, ಇವರಡು ಲಾಕಪ್‌ಗಳ ಸಾವು ನಮ್ಮ ಕಣ್ಣಿನ ಎದುರಿಗೆ ಕಾಣತಕ್ಕಂಥದ್ದು. ಒಂದು ಕೆಂಗೇರಿಗೇಟ್‌ನಲ್ಲಿ ಶಿವಣ್ಣ ಅನ್ನತಕ್ಕ ವ್ಯಕ್ತಿಯನ್ನ ಜನವರಿ ತಿಂಗಳಲ್ಲಿ ಪೋಲೀಸಿನವರೇ ಹೊಡೆದುಹಾಕಿದ್ದಾರೆ. ಇಲ್ಲಿ ಪೋಲೀಸಿನವರೇ ನಂಜುಂಡನನ್ನು ಕೊಂದಿದ್ದಾರೆ. ಇವರಡರ ಬಗ್ಗೆಯೂ ಸಮಗ್ರವಾದ ತನಿಖೆಯಾಗಬೇಕು. ಈ ಬಗ್ಗೆ ಕೂಡಲೆ ಉತ್ತರವನ್ನು ಸರ್ಕಾರ ಕೊಡಬೇಕು. ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳು ಯಾರು ಇದ್ದಾರೆ ಅವರನ್ನು ಕೂಡಲೆ ಕೊಲೆ ಆಪಾದನೆಯ ಮೇಲೆ ಇವತ್ತು ವಜಾ ಮಾಡಿ ಅವರನ್ನು ಬಂಧಿಸಬೇಕು ಎಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಕುಳಿತಿರುವ ನಾವು ಎಲ್ಲ ವಿಷಯದ ಬಗ್ಗೆ ಮಾತನಾಡಬೇಕೆಂದು ಅಪೇಕ್ಷೆ ಇಲ್ಲ. ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿಯ ಹಗರಣಗಳು ಎಲ್ಲಾ ಕಡೆ ನಡೆಯುತ್ತಿವೆ. ಲಾಕಪ್ ಸಾವು ಇರಬಹುದು, ಅಥವಾ ಸ್ಟೇಷನ್ ಒಳಗಡೆ ನಿರಾಪರಾಧಿಗಳ ಬಗ್ಗೆ ಪೋಲೀಸಿನವರು ಮಾಡುತ್ತಿರುವ ದೌರ್ಜನ್ಯ. ನಾನು ನಿನ್ನೆ ಇಲ್ಲಾ ಮೊನ್ನೆ ಶಿಕಾರಿಪುರಕ್ಕೆ ಹೋಗಿದ್ದೆ, ದಿಂಡದಹಳ್ಳಿ ಎಂಬ ಒಂದು ಗ್ರಾಮದಲ್ಲಿ ನಿರಾಪರಾಧಿ ಕೆಲವು ಪ್ರಮುಖ

ವ್ಯಕ್ತಿಗಳನ್ನು ಅಲ್ಲಿರತಕ್ಕಂಥ ಪೋಲೀಸ್ ಕಾನ್ಸ್ಟೇಬಲ್ ಬಟ್ಟೆಬಿಚ್ಚಿ ಹೊಡೆದು ಇಡೀ ಊರು ಬಂದು ಧರಣಿ ಕುಳಿತುಕೊಂಡು ಇವತ್ತು ನಾನು ಅವರನ್ನು ಸಮಾಧಾನಪಡಿಸಿ ಸತ್ಯಾಗ್ರಹದಿಂದ ಮೇಲೆಬ್ಬಿಸಿ ಸಂಬಂಧಪಟ್ಟ ಡಿವೈಎಸ್‌ಪಿ ಜೊತೆ ಮಾತಾಡಿ ಈ ಕಡೆ ಬರಬೇಕಾಯಿತು. ಪೋಲಿಸ್ ಲಾಕಪ್ಪಿನಲ್ಲಿ ಈ ರೀತಿ ಸಾವುಗಳಾದಾಗ ಸಂಬಂಧಪಟ್ಟ ಉನ್ನತ ಅಧಿಕಾರಿಗಳೇ ಪೋಲೀಸರಿಗೆ ರಕ್ಷಣೆ ಕೊಡುವ ಪ್ರಯತ್ನ ಮಾಡಿದರೆ ಬಹುಶಃ ಅವರ ನಡವಳಿಕೆಯಲ್ಲಿತಿದ್ದುಪಡಿಯಾಗುವುದಿಲ್ಲ. ಜನರಿಗೆ ರಕ್ಷಣೆ ಸಿಗುವುದಿಲ್ಲ. ಯಾವ ರೀತಿ ಬೇರೆ ಕೊಲೆ ಮೊಕದ್ದಮೆಗಳಲ್ಲಿ ಉಗ್ರವಾದ ಶಿಕ್ಷ ಮಾಡುತ್ತೇವೆ ಆರೆಸ್ಟ್ ಮಾಡುತ್ತೇವೆ 302 ಪ್ರಕಾರ ಕೇಸ್ ಬುಕ್ ಮಾಡುತ್ತಿವೆಯೇ ಅದೇ ರೀತಿ ಪೋಲೀಸ್ ಸ್ಟೇಶನ್ ಒಳಗೆ ಕಾನೂನುಬಾಹಿರವಾಗಿ ನಡೆದವನ ಮೇಲೆ 302 ಪ್ರಕಾರ ಕೇಸ್ ಬುಕ್ ಮಾಡಿ ಅವನನ್ನು ಅರೆಸ್ಟ್ ಮಾಡದೇ ಇದ್ದರೆ, ಬಹುಶಃ ಖಾಕಿ ಬಟ್ಟೆ ಹಾಕಿಕೊಂಡು ನಾನು ಯಾರನ್ನು ಏನು ಮಾಡಬಹುದುಎಂದು ಫ್ರೀ ಲೈಸೆನ್ಸ್ ಕೊಟ್ಟಂತಾಗುತ್ತದೆ. ಸರ್ಕಾರಕ್ಕೆ ಇದರಿಂದ ಒಳ್ಳೆಯ ಹೆಸರು ಬರುವುದಿಲ್ಲ. ಇಲಾಖೆ ಬೇಡಿಕೆ ಬಂದಾಗ ವಿಶೇಷವಾಗಿ ಈ ಸಾವುನೋವು ಪೋಲೀಸರ ದೌರ್ಜನ್ಯದ ಬಗ್ಗೆ ಎರಡು ಗಂಟೆ ಚರ್ಚೆ ಮಾಡಬೇಕಾಗುತ್ತದೆ. ನಾವು ಹೇಗಿದ್ದರೂ 1ನೇ ತಾರೀಖಿನ ನಂತರ ಕುಳಿತುಕೊಳ್ಳುತ್ತೇವೆ, ಇದಕ್ಕೆ ವಿಶೇಷ ಚರ್ಚೆಗೆ ನಿಮಗೆ ಮನವರಿಕೆ ಮಾಡಿಕೊಡುತ್ತೇವೆ, ನೀವು ಒಪ್ಪಿದರೆ ಚರ್ಚೆ ಮಾಡೋಣ: ಈಗ ನಿಶ್ಚಿತವಾದ ಈ ಕೇಸಿನಲ್ಲಿ ದಯಮಾಡಿ 302 ಪ್ರಕಾರ ಕೇಸ್ ಅವರ ಮೇಲೆ ಬುಕ್ ಮಾಡಿ ತಕ್ಷಣ ಅವರನ್ನು ಒಳಗೆ ಹಾಕಬೇಕು ಇಲ್ಲದಿದ್ದರೆ ಪೋಲೀಸ್ ಸ್ಟೇಷನ್‌ನಲ್ಲಿ ದೌಜನ್ಯ ನಡೆದಾಗ ಸಾವುಂಟಾದಾಗ ಜನರಿಗೆ ಯಾವರೀತಿ ರಕ್ಷಣೆ ಸಿಗುವುದಿಲ್ಲ ಎನ್ನುವ ಭಾವನೆ ಬರುತ್ತದೆ. ದಯಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಈಗಾಗಲೇ ಡಾ. ಜೀವರಾಜ್ ಆಳ್ವ ಮತ್ತು ಕೆಲವು ಸ್ನೇಹಿತರು ಈ lock up death ವಿಚಾರದಲ್ಲಿ ಪ್ರಸ್ತಾಪಮಾಡಿದ್ದಾರೆ ಜರ್ನಲಿಸ್ಟ್‌ರನ್ನು ಯಾವರೀತಿ ಹೆದರಿಸಿದ್ದಾರೆ ಎಂದು ಹೇಳಿದ್ದಾರೆ. ಒಬ್ಬ ಪತ್ರಕರ್ತೆಗೆ ಈ ರಾಜ್ಯದಲ್ಲಿ ರಕ್ಷಣೆ ಇಲ್ಲ ಅಂದರೆ ಹೇಗೆ? ನಮ್ಮ ಮೇಲೂ ಸಾಕಷ್ಟು ಟಿಪ್ಪಣಿ. ಆಗುತ್ತದೆ, ಹಾಗೆಂದು ಅವರನ್ನು ನಾವು ಹೆದರಿಸುವುದಕ್ಕಾಗುತ್ತದಾ? ಅವರಿಗೆ ಅಧಿಕಾರ ಇದೆ, ಬರೆಯುವ ಸ್ವಾತಂತ್ರ್ಯ ಇದೆ. ಸಾಕಷ್ಟು ಲಾಕಪ್ ಡೆತ್ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಈ ಬಗ್ಗೆ ಸದನದಲ್ಲಿ ಏಕೆ ಎತ್ತುವುದೆಂದು ಪೋಲೀಸ್ ಅಧಿಕಾರಿಗೆ ಪತ್ರ ಬರೆದರೆ they have allowed protecting their subordinates. ಈ ರಾಜ್ಯಸರ್ಕಾರದಲ್ಲಿ ಒಂದೂ ಉದಾಹರಣೆ ಇಲ್ಲ. police officers have taken action on their own. ನಾವಿಲ್ಲಿ ಬರಬೇಕು, ರೈಸ್ ಮಾಡಬೇಕು, ಮುಖ್ಯಮಂತ್ರಿ ಅಥವಾ ಗೃಹಮಂತ್ರಿಗಳು ಸಸ್ಪೆಂಡ್ ಮಾಡ್ತೀವಿ ಅಂತ ಹೇಳಬೇಕು. ಇದು ಸರಿಯಲ್ಲ. ಕೈಕೆಳಗಿನವರನ್ನು ರಕ್ಷಣೆ ಮಾಡಬಾರದು ಎಂದು ಹೇಳುವುದಿಲ್ಲ. ಆದರೆ ಒಬ್ಬ ಕೈಕೆಳಗಿನವನು ಅನ್ಯಾಯ ಮಾಡಿದ್ದಾನೆ ಅಂತ ಗೊತ್ತಾದಾಗ ಇಲ್ಲಿ ನಾವು ರೈಸ್ ಮಾಡುವ ಅವಶ್ಯಕತೆ ಇಲ್ಲ. ಅವರಾಗೇ ಕ್ರಮ ತೆಗೆದುಕೊಳ್ಳಬೇಕು. ನಿಮಗೂ ಗೌರವ ಬರುತ್ತದೆ. ಸರ್ಕಾರಕ್ಕೂ ಗೌರವ ಬರುತ್ತದೆ. ಇವತ್ತು ಲಾಕಪ್ ಡೆತ್ ಬಗ್ಗೆ ಪ್ರಸ್ತಾಪಿಸಿರುವ ಅಧಿಕಾರಿಗಳ ವಿರುದ್ಧ ಸಸ್ಪೆನ್‌ಶನ್ ಅಷ್ಟೇ. ಆ Suspension is not a punishment; they should be prosecuted under Sec.302.

ಆಗ ಅವರಿಗೆ ಗೊತ್ತಾಗುತ್ತದೆ ಏನು ಪರಿಣಾಮವಾಗುತ್ತದ ಅಂತ. ಮುಖ್ಯಮಂತ್ರಿಗಳು ಇಲ್ಲ. ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಪರ್ಸನಲ್ ಟೀಕೆ ಮಾಡುವುದಕ್ಕೆ ಹೋಗಲ್ಲ. ಆದರೆ ಅವರು ಏಳೆಂಟು ಖಾತೆ ಇಟ್ಟುಕೊಂಡು ಅದರಲ್ಲಿ ಗೃಹಖಾತೆ ಇಟ್ಟುಕೊಂಡು ಇಷ್ಟು ಅನಾಹುತವಾಗಿದೆ. He has lost his control. ಆದ್ದರಿಂದ ಈ ಪೋಲೀಸ್ ಆಫೀಸರ್ಸ್ ಬೇಜವಾಬ್ದಾರಿ ಆಗಿದ್ದಾರೆ ಏಕೆಂದರೆ He has no time. He has got his own problems being a Chief Minister - ಹಾಗಾಗಿ ಎಷ್ಟು

ಕಾನ್‌ಸೆಂಟ್ರೇಶನ್ ಹೋವರ್ ಮೇಲೆ ಆಗಬೇಕು ಅದು ಅವರ ಕೈಲಿ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ಯಾವ ಖಾತೆ ಎಲ್ಲಿರಬೇಕು ಅಂತ ನಾನು ಹೇಳುವುದು ನನ್ನ ಕರ್ತವ್ಯ ಅಲ್ಲ. But, this is one of the reasons. ಇವತ್ತು ಹರಿಜನರ ಮೇಲೆ ದೌರ್ಜನ್ಯ ಆಗುತ್ತಿದೆ, ಪೋಲೀಸ್ ದೌರ್ಜನ್ಯ ಲಾಕಪ್ ಸಾವು ಆಗುತ್ತಿವೆ ಇದಕ್ಕೆ ಮುಖ್ಯವಾದ ಕಾರಣ ಎಂದರೆ He is not in a position to devote more time on Home portfolio. ಹಾಗಾಗಿ ಇದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಇವತ್ತು ನಮ್ಮ ಮಿತ್ರರು ಏನು ಹೇಳಿದ್ದಾರೆ ಅಂದರೆ ಪತ್ರಕರ್ತರಿಗೆ ಹೆದರಿಸುವ ಬಗ್ಗೆಯಾಗಲಿ, ಅಥವಾ ಲಾಕಪ್ ಡೆತ್ ಬಗ್ಗೆಯಾಗಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಅಂತ ನಮಗೆ ಗೊತ್ತಾಗಬೇಕು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಎಲ್ಲಾ ವಿಷಯದಲ್ಲೂ ಎದ್ದು ನಿಂತುಕೊಳ್ಳುವುದಿಲ್ಲ. ಆದರೆ, ಇವತ್ತು ಎದ್ದು ನಿಂತುಕೊಳ್ಳುವಂತಹ ಪರಿಸ್ಥಿತಿ ಉದ್ಭವವಾಗಿದೆ. ಪೋಲೀಸಿನವರು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಕಾನೂನನ್ನು ರಕ್ಷಣೆ ಮಾಡುವಂಥ ಕೆಲಸ ಇವತ್ತಿನ ದಿವಸ ನಡೆಯುತ್ತಿಲ್ಲ. ಪೋಲೀಸರಾಗಲಿ, ನೀವೇ ಆಗಲಿ, ಅಧ್ಯಕ್ಷ ಪೀಠದಲ್ಲಿರುವಂಥವರು ಆಗಲಿ, ಯಾರೇ ಆಗಲಿ ಕಾನೂನನ್ನು ಮೀರುವಂತಹ ಅಧಿಕಾರ ಯಾರಿಗೂ ಇಲ್ಲ. ಆದರೆ ಇವತ್ತಿನ ದಿವಸ ಕಾನೂನನ್ನು ರಕ್ಷಣೆ ಮಾಡತಕ್ಕಂಥವರೇ ಕಾನೂನನ್ನು ಕೈಗೆ ತೆಗೆದುಕೊಂಡು ಜನರ ಪ್ರಾಣವನ್ನು ತೆಗೆಯುವುದಕ್ಕೆ ಹೊರಟಿದ್ದಾರೆ. ಇದು ಬಹಳ ಅವಮಾನಕರವಾದದ್ದು, ಇಪ್ಪತ್ತನೇ ಶತಮಾನ ಮುಗಿಯುತ್ತಾ ಬಂದಿದೆ. ಇಂತಹ ಪರಿಸ್ಥಿತಿಯಲ್ಲೂ ಕೂಡ ನಮ್ಮ ಪೋಲೀಸರು ಮನುಷ್ಯರಾಗಿ ವ್ಯವಹಾರವನ್ನು ಮಾಡದೆ ಮೃಗಗಳ ರೂಪದಲ್ಲಿ ಮಾಡಿದ್ದಾರೆ. ನೊಣ, ಸೊಳ್ಳೆಗಳ ಪ್ರಾಣವನ್ನು ತೆಗೆಯುವಂತೆ ಮನುಷ್ಯರ ಪ್ರಾಣ ತೆಗೆಯುತ್ತಿದ್ದಾರೆ. ಅಧಿಕಾರದಲ್ಲಿ ಕುಳಿತಿರತಕ್ಕಂಥವರು ನಾಳೆ ಈ ಕಡೆ ಬರಬಹುದು. ಆದರೆ ಪೋಲೀಸರ ಮನೋಭಾವ ಬದಲಾವಣೆಯಾಗುವುದನ್ನು ನಾವು ಕಾಣುತ್ತಾ ಇಲ್ಲ. ಅವರ ಮೇಲೆ ಕೊಲೆ ಮೊಕದ್ದಮೆಯನ್ನು ಹೂಡಲೇ ಬೇಕು. ಕೊಲೆ ಮೊಕದ್ದಮೆಯನ್ನು ಹೂಡಿ, ಕಾನೂನಿಗಿಂತ ಪೋಲೀಸರು ದೊಡ್ಡವರಲ್ಲ ಎನ್ನತಕ್ಕಂಥದನ್ನು ಸಾಬೀತು ಮಾಡಬೇಕು. ಕಳ್ಳತನ ಮಾಡಬಹುದು ಅಥವಾ ಮಾಡುತ್ತಾರೋ? ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ ಅದಕ್ಕೆ ನ್ಯಾಯಾಲಯವಿದೆ, ಅದಕ್ಕೆ ಸರಿಯಾದ ವಿಧಾನಗಳು ಇವೆ, ಆದ್ದರಿಂದ ಅದನ್ನು ಕೈಬಿಡಬೇಕು ಎಂದು ಹೇಳತಕ್ಕಂಥದ್ದು ಸರಿಯಲ್ಲ. ಯಾವ ರೀತಿ ನಡೆದುಕೊಳ್ಳಬೇಕು ಎಂದು ಈ ಪೋಲೀಸರಿಗೆ ಹೇಳುವವರು, ಕೇಳುವವರು ಇಲ್ಲವೆಂದು ಸಾಮಾನ್ಯ ಜನರ ಪ್ರಾಣ ತೆಗೆಯುವುದಕ್ಕೆ ಹೊರಟಿದ್ದಾರೆ. ಇವತ್ತು ಸಂಬಂಧಪಟ್ಟ ಎರಡು ಮೊಕದ್ದಮೆಗಳ ಬಗ್ಗೆ ಹೇಳಿದ್ದಾರೆ. ಮಹಾಲಕ್ಷ್ಮಿ ಬಡಾವಣೆಯಲ್ಲಿ ನಡೆದಿರತಕ್ಕಂಥದ್ದು ಒಂದು ಇನ್ನೊಂದು ಕೆಂಗೇರಿಗೇಟ್‌ನಲ್ಲಿ ನಡೆದಿರತಕ್ಕಂಥದ್ದು, ಈ ಎರಡು ಕೇಸನ್ನು 302ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ ಪೋಲೀಸಿನವರು ಕೂಡ ಕಾನೂನನ್ನು ಮೀರತಕ್ಕವರಲ್ಲ ಎನ್ನುವಂಥದನ್ನು ಈ ರಾಜ್ಯದ ಜನತೆಗೆ ಸಂದೇಶ ಕೊಡಬೇಕಾಗಿದೆ. ಪೋಲೀಸರು ಕೂಡ ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಸಣ್ಣಪುಟ್ಟ ಘಟನೆಗಳನ್ನು ನಾವು ತಲೆಗೆ ಹಾಕಿಕೊಳ್ಳುವುದಿಲ್ಲ. ಆದರೆ ಈ ರೀತಿಯಾದಂತಹ ಪ್ರಾಣಾಂತಕವಾದಂತಹ ರೀತಿಯಲ್ಲಿ ಪೋಲೀಸರು ನಡೆಯುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಆದುದರಿಂದ ಸರ್ಕಾರ ಇದನ್ನು ಅರ್ಥ ಮಾಡಿಕೊಂಡು ಇವತ್ತು ಉತ್ತರ ಕೊಡಬೇಕು. ಅವರ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿ, ಪೋಲೀಸರು ಕಾನೂನಿಗಿಂತ ಮಿಗಿಲಾದವರಲ್ಲ ಎನ್ನುವುದನ್ನು ತೋರಿಸಿಕೊಡುತ್ತದೆ ಎನ್ನುವುದನ್ನು ಸರ್ಕಾರ ಹೇಳಬೇಕು ಎಂದು ಮತ್ತೊಮ್ಮೆ ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಇನ್ನು ಐದು ನಿಮಿಷಗಳಲ್ಲಿ ಸಭೆಗೆ ಬಂದು ಈ ವಿಷಯಕ್ಕೆ ಸೇರಿದಂತೆ, ಮಾತನಾಡುತ್ತಾರೆ. ವಿಷಯ ಏನು ಇದೆ

ಎಂದು ಹೇಳಿಕಳುಹಿಸಿದ್ದೇನೆ ಮತ್ತು ಸಂಬಂಧಪಟ್ಟ ಇಲಾಖೆಗೂ ಹೇಳಿಕಳುಹಿಸಿವೆ. ಇದರ ಬಗ್ಗೆ ಹೆಚ್ಚು ಮಾಹಿತಿ ಬರುತ್ತದೆ ಇದೆಲ್ಲವನ್ನು ವಿವರವಾಗಿ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕಾಗಿಲ್ಲ, ಅವರು ಬರುವುದಕ್ಕೆ ಕಾಯಬೇಕಾಗಿಲ್ಲ. ಅಧಿಕಾರಿಗಳಿಂದ ಮಾಹಿತಿ ತರಿಸಿ 302 ಪ್ರಕಾರ ಕೇಸ್ ಬುಕ್ ಮಾಡಿ ಅವರ ಮೇಲೆ ಸರಿಯಾದಂತಹ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಡಿ. ಮುಖ್ಯಮಂತ್ರಿಗಳು ಇಲ್ಲದೆ ಹೋದರೆ ಬೇರೆಯವರು ಉತ್ತರ ಕೊಡಬೇಕಾಗುತ್ತದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಅವರು ಏಕೆ ಬೇಕು?

ಶ್ರೀ ಸಿ. ಬೈರೇಗೌಡ:- ಲಾಕಪ್‌ನಲ್ಲಿ ಆ ವ್ಯಕ್ತಿ ಸತ್ತು ಹೋಗಿದ್ದಾನೆ. ಅಲ್ಲಿ ಮರ್ಡರ್ ಮಾಡಿದ್ದಾರೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಮುಖ್ಯಮಂತ್ರಿಗಳೇ ಏಕೆ ಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಪುನಃ ಹೇಳಬೇಕಾಗಿಲ್ಲ. ಬಹಳ ಗಾಂಭೀರ್ಯವಾದಂತಹ, ಹೀನಾಯವಾದಂತಹ ವಿಷಯವಾಗಿದೆ. ಪೋಲೀಸ್ ಲಾಕಪ್‌ನಲ್ಲಿ ಸಾಯುವುದು ಎಂದರೆ ಅದು ಒಂದು ಅನುಮಾನಕ್ಕೆ ಕಾರಣವಾಗಿದೆ. ತಾವು ಹೇಳಿದ ಹಾಗೆ, ಈ ವಿಷಯದ ಬಗ್ಗೆ ಅಧಿಕಾರವರ್ಗದವರಿಗೆ ವಿವರಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮ್ಮ ಸರ್ಕಾರ ಕಾನೂನು ಪ್ರಕಾರ ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೀರಾ, ಅದನ್ನು ತಾವು ಹೇಳುವಂತಹ ಅವಶ್ಯಕತೆ ಇಲ್ಲ. ನಿಮ್ಮ ಸರ್ಕಾರ ಲಾಕಪ್‌ನಲ್ಲಿ ಸಾವು ಆದತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಇಡುತ್ತದೆ ಎಂದು ಹತ್ತಾರು ಬಾರಿ ನೀವೇ ಹೇಳಿದ್ದೀರಿ, ಆದರೂ ನೀವು ಏಕೆ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿಲ್ಲ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಲಾಕಪ್‌ನಲ್ಲಿ ಸಾವು ನಡೆದರೆ ತಕ್ಷಣ ಸಿಓಡಿಗೆ ಕೊಡುತ್ತೇವೆ ಎಂದು ಇದೇ ಸರ್ಕಾರದವರು ಹೇಳಿದ್ದಾರೆ. ಇಂತಹ ಪ್ರಕರಣಕ್ಕೆ ಸಂಬಂಧಪಟ್ಟವರನ್ನು ಕೂಡಲೇ ಅಮಾನತ್ತಿನಲ್ಲಿ ಇಟ್ಟು ನಾವು ಸಿಓಡಿ ತನಿಖೆಗೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಇದುವರೆಗೂ ಕೆಂಗೇರಿ ಗೇಟ್ ಮತ್ತು ಮಹಾಲಕ್ಷ್ಮಿ ಬಡಾವಣೆ ಪ್ರಕರಣಗಳನ್ನು ಸಿಓಡಿ ತನಿಖೆಗೆ ಕೊಟ್ಟಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮಗೆ ದೊರೆತಿರುವಂತಹ ಇನ್‌ಫರ್ಮೇಷನಲ್ಲಿ ಈ ವಿಷಯ ಈ ರೀತಿ ಇದೆ. ಶ್ರೀ ನಂಜುಂಡ.....

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ಇಲ್ಲ ಎರಡು ಕೇಸ್‌ಗಳು ಇವೆ. ಕೆಂಗೇರಿ ಗೇಟ್ ಪ್ರಕರಣದಲ್ಲಿ ಸಂಬಂಧಿಸಿದಂತೆ ಶಿವಣ್ಣ ಎನ್ನುವವರದು ಮತ್ತು ಇನ್ನೊಂದು ಮಹಾಲಕ್ಷ್ಮಿ ಬಡಾವಣೆ ಪ್ರಕರಣಕ್ಕೆ ಸಂಬಂಧಪಟ್ಟಿರುವುದು. ಕೆಂಗೇರಿ ಗೇಟ್‌ದು ಸಂಬಂಧಪಟ್ಟಂತಹ ಪತ್ರಿಕೆ ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ, ಇದನ್ನು ತೆಗೆದುಕೊಳ್ಳಿ. ಇದು ತಮ್ಮ ಮಾಹಿತಿಗೆ ಇರಲಿ, ನಿಮ್ಮ ಸರ್ಕಾರದ ಹತ್ತಿರ ತಕ್ಷಣಕ್ಕೆ ಮಾಹಿತಿ ಇಲ್ಲ ಅದನ್ನು ನಾನು ಕೊಡುತ್ತೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇಗ ಬಂದಿರತಕ್ಕಂತಹ ಮಾಹಿತಿ ಪ್ರಕಾರ ಈ ರೀತಿ ಇದೆ. ಶ್ರೀ ನಂಜುಂಡ ಎನ್ನುವವರು ಮಹಾಲಕ್ಷ್ಮಿ ಬಡಾವಣೆ ಪೋಲೀಸ್ ಶಾಖೆಯ ಅಧೀನದಲ್ಲಿ ಇದ್ದ ಸಮಯದಲ್ಲಿ ಸಂಭವಿಸಿದ ಸಾವಿನ ಬಗ್ಗೆ: ತಾರೀಖು 23-3-93ರಂದು ಮಧ್ಯಾಹ್ನ ಮೂರು ಗಂಟೆಗೆ ಮಲ್ಲೇಶ್ವರಂ ವಿಭಾಗದ ಅಪರಾಧಿ ದಳದವರು, ಮಾಲು ಕಳುವಾಗಿದೆ. ಶ್ರೀ ಸಿ. ಕುಮಾರ್ ತಂದೆ ಶ್ರೀ

ಎಂದು ಹೇಳಿಕಳುಹಿಸಿದ್ದೇನೆ ಮತ್ತು ಸಂಬಂಧಪಟ್ಟ ಇಲಾಖೆಗೂ ಹೇಳಿಕಳುಹಿಸಿವೆ. ಇದರ ಬಗ್ಗೆ ಹೆಚ್ಚು ಮಾಹಿತಿ ಬರುತ್ತದೆ ಇದೆಲ್ಲವನ್ನು ವಿವರವಾಗಿ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕಾಗಿಲ್ಲ, ಅವರು ಬರುವುದಕ್ಕೆ ಕಾಯಬೇಕಾಗಿಲ್ಲ. ಅಧಿಕಾರಿಗಳಿಂದ ಮಾಹಿತಿ ತರಿಸಿ 302 ಪ್ರಕಾರ ಕೇಸ್ ಬುಕ್ ಮಾಡಿ ಅವರ ಮೇಲೆ ಸರಿಯಾದಂತಹ ಕ್ರಮ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಡಿ. ಮುಖ್ಯಮಂತ್ರಿಗಳು ಇಲ್ಲದೆ ಹೋದರೆ ಬೇರೆಯವರು ಉತ್ತರ ಕೊಡಬೇಕಾಗುತ್ತದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಅವರು ಏಕೆ ಬೇಕು?

ಶ್ರೀ ಸಿ. ಬೈರೇಗೌಡ:- ಲಾಕಪ್‌ನಲ್ಲಿ ಆ ವ್ಯಕ್ತಿ ಸತ್ತು ಹೋಗಿದ್ದಾನೆ. ಅಲ್ಲಿ ಮರ್ಡರ್ ಮಾಡಿದ್ದಾರೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಮುಖ್ಯಮಂತ್ರಿಗಳೇ ಏಕೆ ಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಪುನಃ ಹೇಳಬೇಕಾಗಿಲ್ಲ. ಬಹಳ ಗಾಂಭೀರ್ಯವಾದಂತಹ, ಹೀನಾಯವಾದಂತಹ ವಿಷಯವಾಗಿದೆ. ಪೋಲೀಸ್ ಲಾಕಪ್‌ನಲ್ಲಿ ಸಾಯುವುದು ಎಂದರೆ ಅದು ಒಂದು ಅನುಮಾನಕ್ಕೆ ಕಾರಣವಾಗಿದೆ. ತಾವು ಹೇಳಿದ ಹಾಗೆ, ಈ ವಿಷಯದ ಬಗ್ಗೆ ಅಧಿಕಾರವರ್ಗದವರಿಗೆ ವಿವರಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮ್ಮ ಸರ್ಕಾರ ಕಾನೂನು ಪ್ರಕಾರ ಕೆಲಸ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೀರಾ, ಅದನ್ನು ತಾವು ಹೇಳುವಂತಹ ಅವಶ್ಯಕತೆ ಇಲ್ಲ. ನಿಮ್ಮ ಸರ್ಕಾರ ಲಾಕಪ್‌ನಲ್ಲಿ ಸಾವು ಆದತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಇಡುತ್ತದೆ ಎಂದು ಹತ್ತಾರು ಬಾರಿ ನೀವೇ ಹೇಳಿದ್ದೀರಿ, ಆದರೂ ನೀವು ಏಕೆ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿಲ್ಲ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಲಾಕಪ್‌ನಲ್ಲಿ ಸಾವು ನಡೆದರೆ ತಕ್ಷಣ ಸಿಓಡಿಗೆ ಕೊಡುತ್ತೇವೆ ಎಂದು ಇದೇ ಸರ್ಕಾರದವರು ಹೇಳಿದ್ದಾರೆ. ಇಂತಹ ಪ್ರಕರಣಕ್ಕೆ ಸಂಬಂಧಪಟ್ಟವರನ್ನು ಕೂಡಲೇ ಅಮಾನತ್ತಿನಲ್ಲಿ ಇಟ್ಟು ನಾವು ಸಿಓಡಿ ತನಿಖೆಗೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಇದುವರೆಗೂ ಕೆಂಗೇರಿ ಗೇಟ್ ಮತ್ತು ಮಹಾಲಕ್ಷ್ಮಿ ಬಡಾವಣೆ ಪ್ರಕರಣಗಳನ್ನು ಸಿಓಡಿ ತನಿಖೆಗೆ ಕೊಟ್ಟಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇದುವರೆಗೂ ನಮಗೆ ದೊರೆತಿರುವಂತಹ ಇನ್‌ಫರ್ಮೇಷನಲ್ಲಿ ಈ ವಿಷಯ ಈ ರೀತಿ ಇದೆ. ಶ್ರೀ ನಂಜುಂಡ.....

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ, ಇಲ್ಲ ಎರಡು ಕೇಸ್‌ಗಳು ಇವೆ. ಕೆಂಗೇರಿ ಗೇಟ್ ಪ್ರಕರಣದಲ್ಲಿ ಸಂಬಂಧಿಸಿದಂತೆ ಶಿವಣ್ಣ ಎನ್ನುವವರದು ಮತ್ತು ಇನ್ನೊಂದು ಮಹಾಲಕ್ಷ್ಮಿ ಬಡಾವಣೆ ಪ್ರಕರಣಕ್ಕೆ ಸಂಬಂಧಪಟ್ಟಿರುವುದು. ಕೆಂಗೇರಿ ಗೇಟ್‌ದು ಸಂಬಂಧಪಟ್ಟಂತಹ ಪತ್ರಿಕೆ ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ, ಇದನ್ನು ತೆಗೆದುಕೊಳ್ಳಿ. ಇದು ತಮ್ಮ ಮಾಹಿತಿಗೆ ಇರಲಿ, ನಿಮ್ಮ ಸರ್ಕಾರದ ಹತ್ತಿರ ತಕ್ಷಣಕ್ಕೆ ಮಾಹಿತಿ ಇಲ್ಲ ಅದನ್ನು ನಾನು ಕೊಡುತ್ತೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇಗ ಬಂದಿರತಕ್ಕಂತಹ ಮಾಹಿತಿ ಪ್ರಕಾರ ಈ ರೀತಿ ಇದೆ. ಶ್ರೀ ನಂಜುಂಡ ಎನ್ನುವವರು ಮಹಾಲಕ್ಷ್ಮಿ ಬಡಾವಣೆ ಪೋಲೀಸ್ ಶಾಖೆಯ ಅಧೀನದಲ್ಲಿ ಇದ್ದ ಸಮಯದಲ್ಲಿ ಸಂಭವಿಸಿದ ಸಾವಿನ ಬಗ್ಗೆ: ತಾರೀಖು 23-3-93ರಂದು ಮಧ್ಯಾಹ್ನ ಮೂರು ಗಂಟೆಗೆ ಮಲ್ಲೇಶ್ವರಂ ವಿಭಾಗದ ಅಪರಾಧಿ ದಳದವರು, ಮಾಲು ಕಳುವಾಗಿದೆ. ಶ್ರೀ ಸಿ. ಕುಮಾರ್ ತಂದೆ ಶ್ರೀ

ಚಂದೂಲಾಲ್‌ರವರು ಏಕೆ ಹೋಗಿದ್ದರು? ಅಲ್ಲಿ ಹೋಗಿ rest of the officers will follow suit. ಇವತ್ತು ನೀವು ಅದೇ ಅಧಿಕಾರಿಗಳು ತಂದ ಉತ್ತರ ಓದುವುದಾದರೆ ಹಾರ್ನಳ್ಳಿ ರಾಮಸ್ವಾಮಿಯವರಿಗೆ ನಮಗೆ ನೋವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾವು ಬೆಡ್ ಶೀಟ್ ಕಥೆ ಹೇಳಬೇಡಿ. ಬೆಡ್ ಶೀಟ್ ಕಥೆಯಿಂದ ನಮಗೆ ಪ್ರಯೋಜನವಾಗುವುದಿಲ್ಲ. ಬೆಡ್ ಶೀಟ್‌ನಿಂದ ನೇಣು ಹಾಕಿಕೊಳ್ಳುವುದು ಏನಾದರೂ ಈ ಜಗತ್ತಿನಲ್ಲಿ ಉಂಟಾ ಸ್ವಾಮಿ. ಬೆಕ್ಕಿಗೆ ಜ್ವರ ಬರುವ ಹಾಗೆ ಮಾತನಾಡುತ್ತಿದ್ದೀರಿ. ಏನು ನೀತಿ ಬೇಡವೆ, ಬೆಡ್ ಶೀಟ್‌ನಲ್ಲಿ ನೇಣು ಹಾಕಿಕೊಳ್ಳುವುದನ್ನು ಯಾವ ಪೋಲೀಸ್ ಹೇಳುತ್ತಿರುವುದು. ಪೋಲೀಸರು ಸುಳ್ಳು ಕಥೆ ಕಟ್ಟುತ್ತಿದ್ದಾರೆ. ಕೆಂಗೇರಿ ಗೇಟ್ ಠಾಣೆಯಲ್ಲಿ ಶಿವಣ್ಣ ಸತ್ತಿರುವುದು, ಮಹಾಲಕ್ಷ್ಮಿ ಲೇಔಟ್‌ನಲ್ಲಿ ನಂಜುಂಡ ಸತ್ತಿರುವುದು, ಅವನು ಯಾವ ಬೆಡ್ ಶೀಟ್‌ನಲ್ಲಿ ನೇಣು ಹಾಕಿಕೊಂಡು ಸತ್ತ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬೆಡ್ ಶೀಟ್ ತರಿಸಿ ನೇಣು ಹಾಕಿ ತೋರಿಸಿ ಸತ್ಯವೇ ಎಂದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಇದು ನನ್ನ ಸರ್ಕಾರದ ಅಭಿಪ್ರಾಯ ಎಂದು ನಾನು ಹೇಳಲಿಲ್ಲ. ಇಲಾಖೆಯವರು ಏನು ಹೇಳಿದ್ದಾರೆ ಅದನ್ನು ಹೇಳುತ್ತಿದ್ದೇನೆ. ಅದು ತಪ್ಪಿದ್ದರೆ, ಅದನ್ನು ತಾವು ಕೇಳುವ ಅಧಿಕಾರ ಇದೆ. ಆದರೆ ಇಷ್ಟೊಂದು ಆತುರ ಮಾಡುವುದರಿಂದ ... ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಅದನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ ಅದನ್ನು ಅವರು ಹೇಳುತ್ತಾರೆ. ಪೋಲೀಸ್ ಕಾನ್ಸ್‌ಟೇಬಲ್ ನರಸಿಂಹಯ್ಯ, ಕಾನ್ಸ್‌ಟೇಬಲ್ ಈಶ್ವರಪ್ಪ, ಸೆಂಟ್ರಿ ಕಾಂತರಾಜ್ ಇವರುಗಳ ಮೇಲೆ ಅಜಾಗರೂಕತೆಗಾಗಿ ಎಸ್. ಐ. ಚಿಕ್ಕ ಬೋರಯ್ಯ, ಅಚ್ಚುತ ರಾವ್ ಇವರುಗಳ ಮೇಲೂ ತಮ್ಮ ಕರ್ತವ್ಯ ಲೋಪಕ್ಕೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ. ಸದರಿ ಪ್ರಕರಣವನ್ನು ಸಿ.ಓ.ಡಿ.ಗೆ ಮುಂದಿನ ತನಿಖೆಗಾಗಿ ವಹಿಸಲಾಗಿದೆ. ಪೋಸ್ಟ್ ಮಾರ್ಟಂ ರಿಪೋರ್ಟ್ ಎಂದು ಕೊಟ್ಟಿದ್ದಾರೆ. ಮುಂದಿನದನ್ನು ಮುಖ್ಯ ಮಂತ್ರಿಗಳು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ:- ಆ ಹೆಣ ಸುಟ್ಟು ಹಾಕಬೇಕಾದರೆ ಕಾರಣ ಏನು? ಇವತ್ತು ಸೆಕೆಂಡ್ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಅವಕಾಶ ಇಲ್ಲದಂತೆ ಮಾಡಿದ್ದಾರೆ. ಹೆಣ ಸುಡಲು ಕಾರಣ ಏನು? ಅವನ ಹೆಂಡತಿಗೆ ನೋಡಲು ಏಕೆ ಅವಕಾಶ ಕೊಡಲಿಲ್ಲ. ಡಾಕ್ಟರನ್ನು ಹೆದರಿಸಿ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮರ್ಡರ್ ಮಾಡಿರುವಂತವರ ರಕ್ಷಣೆ ಮಾಡುತ್ತಿದ್ದೀರಿ. ಸರ್ಕಾರದ ಅಧಿಕಾರಿಗಳು ಕೊಟ್ಟ ಸ್ಟೇಟ್‌ಮೆಂಟ್ ತಾವು ಓದಬೇಡಿ. ಈ ಕಡೆ ಇರುವಂಥ ಎಲ್ಲಾ ಸದಸ್ಯರಿಗೂ ಸಹಾ ಅಲ್ಲಿ ನಡೆದಿರತಕ್ಕಂಥ ಸತ್ಯ ಘಟನೆ ಗೊತ್ತಿದೆ. ಉದ್ದೇಶ ಪೂರ್ವಕವಾಗಿ ಅದನ್ನು ಸುಟ್ಟು ಹಾಕಿದ್ದೀರಿ. ಇಂತಹ ಮೆಡಿಕಲ್ ಸರ್ಟಿಫಿಕೇಟ್‌ನ್ನು ನೀವು ನೂರಾರು ತರಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಅದು ನಿಮಗೆ ಗೊತ್ತಿದೆ. ದಯಮಾಡಿ ನೀವು ಸರಿಯಾಗಿ ಕ್ರಮ ತೆಗೆದುಕೊಂಡು 302ರ ಪ್ರಕಾರ ಕೇಸ್ ಬುಕ್ ಮಾಡಿ ಎಂದು ಹೇಳಿ. ನಿಮಗೆ ಮನವರಿಕೆ ಅದರೆ ಅದನ್ನು ಮಾಡಿ. ಅಧಿಕಾರಿಗಳು ಕೊಟ್ಟಂಥ ಸ್ಟೇಟ್‌ಮೆಂಟ್ ತಾವು ಓದಿ ಇದನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡಿದರೆ ನಾವು ಈ ಸದನದಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಅದಕ್ಕೆ ತೀವ್ರವಾದ ರೀತಿಯಲ್ಲಿ ಪ್ರತಿಭಟನೆ ವ್ಯಕ್ತಪಡಿಸಬೇಕಾಗುತ್ತದೆ. ಇದು ಗೌರವ ತರುವಂಥ ಸಂಗತಿ ಅಲ್ಲ. ಇಡೀ ರಾಜ್ಯದ ಎಲ್ಲಾ ಪೋಲೀಸರು ಎಲ್ಲಾ ಸ್ಟೇಷನ್‌ಲ್ಲಿ ಇದನ್ನೆ ಮಾಡುತ್ತಾರೆ, ಏನು ಚೇಕಾದರೂ ಮಾಡಿ ಉಳಿದುಕೊಳ್ಳಬಹುದು ಎಂದು ನೀವು ಅವರ ಪರವಾಗಿ ನಿಂತಂತ ಅಕ್ಷಮ್ಯ ಅಪರಾಧವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಇದು ಪೊಲೀಸ್ ರಾಜ್ಯವಾಗುತ್ತಿದೆ ಈ ಸದನದಲ್ಲಿ ಅನೇಕ ಬಾರಿ ಪೊಲೀಸ್ ಕತ್ಯದ ಬಗ್ಗೆ ಚರ್ಚೆ ನಡೆದಿದೆ. ಇದು ಸರಿಯಲ್ಲ. ನಾನು ಕೆಂಗೇರಿ ಗೇಟ್ ಪೊಲೀಸ್ ಠಾಣೆ ಬಗ್ಗೆ ಕೊಟ್ಟಿದ್ದೆ. ಇದು ಜನವರಿಯಲ್ಲಿ ನಡೆದಿದೆ. ಶಿವಣ್ಣ ಎನ್ನುವವನನ್ನು ನೇತು ಹಾಕಿರತಕ್ಕಂಥದ್ದು, ಎದೆಗೆ ಹೊಡೆದಿರತಕ್ಕಂಥದ್ದು ಅದರ ಬಗ್ಗೆ ಏಕೆ ತನಿಖೆಯಾಗಿಲ್ಲ. ನಂಜುಂಡನ ಬಗ್ಗೆ ತನಿಖೆ ಇಲ್ಲ. ಶಿಸ್ತಿನ ಕ್ರಮ ಎಂದು ಹೇಳುತ್ತಾರೆ. ಯಾರಾದರೂ ಬೆಡ್ ಶೀಟ್‌ನಲ್ಲಿ ನೇಣುಹಾಕಿಕೊಳ್ಳತಕ್ಕಂತದ್ದು ಎಲ್ಲಾದರೂ ಉಂಟೆ, ಈ ಪ್ರಪಂಚದಲ್ಲಿ ಎಲ್ಲೂ ಇಲ್ಲ. ಬೆಡ್ ಶೀಟ್‌ನ್ನು ಎಲ್ಲಿ ಇಟ್ಟಿದ್ದರು, ಯಾವ ಲಾಕಪ್‌ನಲ್ಲಿ ಬೆಡ್ ಶೀಟ್ ಇಟ್ಟಿದ್ದರು. ಯಾರನ್ನು ಲಾಕಪ್‌ಗೆ ಕಳುಹಿಸಬೇಕಾದರು ಬಟ್ಟೆ ಬಿಚ್ಚಿ ಬರೀ ಮೈಯಲ್ಲಿ ಕಳುಹಿಸ ತಕ್ಕಂತದ್ದು. ಇದು ಕಟ್ಟು ಕಥೆ. ಇದು ಪೊಲೀಸರು ದೃಷ್ಟಿ ಮಾಡಿರತಕ್ಕಂಥ ಕಥೆ. ಈ ಬಗ್ಗೆ ಸರ್ಕಾರ ಸ್ಪಷ್ಟ ಭರವಸೆ ಕೊಡಬೇಕು. ಪೊಲೀಸ್ ಲಾಕಪ್ ಸಾವು ಆದರೆ ಸಿ.ಓ.ಡಿ.ತನಿಖೆಗೆ ಕೂಡಲೆ ಮಾಡುತ್ತೇವೆಂದು ತಾವು ಹೇಳಿದ್ದೀರಿ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ :- ಹೆಣ ಏಕೆ ಸುಟ್ಟರು ಹೇಳಬೇಕು.

ಶ್ರೀ.ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :- ಸನ್ಮಾನ್ಯ ಅಧ್ಯಕ್ಷರೆ, ಈ ಮಲ್ಲೆಶ್ವರಮ್ ವಿಭಾಗದ ಅಪರಾಧ ದಳದವರು ಕುಮಾರ್ ಇವರ ಬಗ್ಗೆ ಮಹಾಲಕ್ಷ್ಮಿ ಬಡಾವಣೆ ಪೊಲೀಸ್ ಸರದದ್ದಿನಲ್ಲಿರತಕ್ಕಂತ... ನಮಗೆ ಯಾರನ್ನು ರಕ್ಷಣೆ ಮಾಡಬೇಕಾದಂತ ಅವಶ್ಯಕತೆ ಇಲ್ಲ. ಯಾರು ತಪ್ಪಿತಸ್ಥರಿದ್ದಾರೆ ಅವರು ಶಿಕ್ಷೆ ಅನುಭವಿಸುತ್ತಾರೆ. we are not going to spare anyone. Lapses, if any I will find out myself. I will give a statement. ಏಕೆಂದರೆ ಲಾಕಪ್ ಡೆಥ್ ಇದು ಆಗಿದ್ದರೆ. ಇದನ್ನು ತಕ್ಷಣ ನಾವು ಸಿ.ಓ.ಡಿ.ಗೆ ಒಪ್ಪಿಸುತ್ತೇವೆ. ಸಿ.ಓ.ಡಿ.ಗೆ ಒಪ್ಪಿಸಿ, ಅದಕ್ಕೆ ಉನ್ನತ ಅಧಿಕಾರಿಯನ್ನು ಇವೊತ್ತಿನ ದಿವಸವೇ ಹೋಗಿ ತನಿಖೆ ಪ್ರಾರಂಭ ಮಾಡಲು ತಿಳಿಸುತ್ತೇವೆ. ಪ್ರಾಸ್ತಾವಿಕವಾಗಿ ಯಾರು ಜವಾಬ್ದಾರಿದ್ದಾರ ಎಂಬುದು ಕಂಡು ಬಂದಮೇಲೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾರೇ ಆಗಿದ್ದರೂ ಸಹ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಯಾವ ಅನುಮಾನವನ್ನು ಪಡಬೇಕಾಗಿಲ್ಲ. ಇದು ಮಾತ್ರ ಅಲ್ಲ ನಾನು ಕೂಡ ಇದಕ್ಕೆ ಸಂಬಂಧಪಟ್ಟವರನ್ನು ಕರೆಯಿಸಿ ಏನು ತನಿಖೆ ನನ್ನ ಒಂದು ಸರಹದ್ದಿನಲ್ಲಿ ಮಾಡಬೇಕು ಅದನ್ನು ನಾನು ಪ್ರತ್ಯೇಕವಾಗಿ ಮಾಡುತ್ತೇನೆ. ಇದನ್ನು ಸಿ.ಓ.ಡಿ.ಗೆ ಕೊಡುತ್ತೇವೆ. ಸಿ.ಓ.ಡಿ.ಗೆ ಕೊಟ್ಟಮೇಲೂ ಸಹ ನಾನು ಕೂಡ ತನಿಖೆ ಮಾಡಿ ನಾಳೆ ಇದರ ಬಗ್ಗೆ ಒಂದು ಹೇಳಿಕೆ ಮಾಡುತ್ತೇನೆ. ನಾನೇ ಖುದ್ದಾಗಿ ಇದರ ಬಗ್ಗೆ ಪರಿಶೀಲನೆ ಮಾಡಿ ತಿಳಿಸುತ್ತೇನೆ. ತಾವೇನು 40ದಿವಸ ಇಟ್ಟು ಕೊಂಡಿದ್ದಾರೆ ಎಂದು ಏನು ಹೇಳಿದ್ದೀರಿ ಅದು ಏನಾದರೂ ನಿಜವಾಗಿದ್ದರೆ ಅದಕ್ಕೆ ಕ್ಷಮೆ ಇಲ್ಲ. I am refereing to the mahalakshmi layout case. ಇನ್ನು ಕೆಂಗೇರಿ ಗೇಟ್ ಬಗ್ಗೆ ಮಾಹಿತಿನ್ನು ನಾನು ತರಿಸುತ್ತೇನೆ. ಇದರ ಬಗ್ಗೆಯೂ ಕೂಡ ಒಂದು ಸೂಕ್ತ ಹೇಳಿಕೆಯನ್ನು ನಾಳೆ ಮಾಡುತ್ತೇನೆ.

ಶ್ರೀ ಎಂ.ನಾರಾಯಣಸ್ವಾಮಿ :- ಪೊಲೀಸರು ಏನು ಮಾಡುತ್ತಾರೆ ಎಂದರೆ 40ದಿವಸ ಇಟ್ಟುಕೊಂಡರೂ ಕೂಡ ಆಫಿಶಿಯಲ್ ಆಗಿ ಬೇರೆ ರೀತಿ ಬರೆಯುತ್ತಾರೆ.....

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ ನಂಜನಗೂಡಿನ ಘಟನೆಗೆ ಸಂಬಂಧಸಿದಂತೆ ಕೊಟ್ಟಿರುವ ನಿಮ್ಮ ನಿಲುವಳಿ ಸೂಚನೆಯನ್ನು ಸಹ ಒಟ್ಟಿಗೆ ಸೇರಿಸುತ್ತೇನೆ. ಈಗ ವಿರೋಧ ಪಕ್ಷದ ನಾಯಕರು ನಂಜನಗೂಡಿನ ಘಟನೆಯ ಬಗ್ಗೆ ಮಾತನಾಡುತ್ತಾರೆ.